

ಪೆಂಡೆಂಟ್, ನೆಕ್ಲೇಸ್, ವುಡನ್ ಬ್ಯಾಂಗಲ್ ಸೆಟ್, ಆ್ಯಂಟಿಕ್ ಫಿನಿಷ್ ಸಿಲ್ವರ್ ಟೆಂಪಲ್ ನೆಕ್ಲೇಸ್ ಮುಂತಾದವು ದಾಂಡಿಯಾ ರಾತ್ರಿಗೆ ಸೂಕ್ತವಾದವು ಎನ್ನುವುದು ಫ್ಯಾಷನ್ ತಜ್ಞರ ಅಭಿಮತ.

ಇದು ಸಾಂಪ್ರದಾಯಿಕ ಉಡುಗೆ, ಒಡವೆಗಳ ಮಾತಾದರೆ ಇಂದಿನ ಆಧುನಿಕ ಫ್ಯಾಷನ್ ಜಗತ್ತಿಗೆ ಸೂಕ್ತವಾದ ನವರಾತ್ರಿ ಉಡುಪುಗಳೂ ಫ್ಯಾಷನ್ ಟ್ರೆಂಡ್ ಆಗಿವೆ. ಜೀನ್ಸ್‌ನೊಂದಿಗೆ ಎಥ್ನಿಕ್ ಟಾಪ್ ಮತ್ತು ಜುಮ್ಕಾ ಧರಿಸಿ ನವರಾತ್ರಿ ಸಂಭ್ರಮಕ್ಕೆ ಆಧುನಿಕತೆಯ ಟ್ವಿಸ್ಟ್ ನೀಡಬಹುದು. ಇದಕ್ಕಾಗಿ ಗ್ರೀನ್ ಕಾಟನ್ ಫ್ಲೋರಲ್ ಹ್ಯಾಂಡ್ ಪ್ರಿಂಟೆಡ್ ಟಾಪ್, ಬ್ಲೂ ಜೀನ್ಸ್, ಮಲ್ಟಿ ಕಲರ್ ಎಂಬ್ರಾಯಿಡರಿ ವರ್ಕ್ ಉಡುಪುಗಳಿಗೆ ಮ್ಯಾಚಿಂಗ್ ಆಗಲು ಆ್ಯಂಟಿಕ್ ಸಿಲ್ವರ್ ಜುಮ್ಕಿ, ಮಲ್ಟಿಕಲರ್ ಒಡವೆ ಸೆಟ್‌ಗಳು ಉತ್ತಮ ಸಾಥ್ ನೀಡಬಹುದು.

ಕೆಲವು ಕಂಪೆನಿಗಳು ನವರಾತ್ರಿ ಆಚರಣೆಗಾಗಿಯೇ 'ಗೋ ಟ್ರೆಡಿಷನಲ್', ಮಿಕ್ಸ್ ಅಂಡ್ ಮ್ಯಾಚ್, ಎಥ್ನಿಕ್ ಕ್ರಾಪ್ ಟಾಪ್, ಫೆಸ್ಟಿವ್ ಡ್ರೆಸಿಂಗ್ ಮುಂತಾದ ಹೆಸರಿನಲ್ಲಿ ಸೀರೆ, ಸಲ್ವಾರ್, ಟಾಪ್, ಸ್ಕರ್ಟ್‌ಗಳನ್ನು ಹೊರತಂದಿವೆ. 'ಗೋ ಟ್ರೆಡಿಷನಲ್' ಮಾದರಿಯಲ್ಲಿ ಕೆಂಪು ಬಾಂದನಿ ಸೀರೆ ಕ್ಲಾಸಿಕ್ ನವರಾತ್ರಿ ಶೈಲಿಯನ್ನೇ ಹೊಂದಿದೆ ಎನ್ನುವುದು ಫ್ಯಾಷನ್ ಉಡುಪು ಹಾಗೂ ಆ್ಯಸೆಸ್ಸರೀಸ್‌ಗೆ ಹೆಸರಾದ 'ಲೈಮ್‌ರೋಡ್' ಕಂಪೆನಿಯ ಹೇಳಿಕೆ. ಇದರಲ್ಲಿ ಕೆಂಪು ಬಾಂದನಿ ಪ್ರಿಂಟೆಡ್ ಜಾರ್ಜೆಟ್ ಸೀರೆ ಅತ್ಯಂತ ಸೂಕ್ತವಾದದ್ದು.

ಮಿಕ್ಸ್ ಅಂಡ್ ಮ್ಯಾಚ್ ಸರಣಿಯಲ್ಲಿ ಎಥ್ನಿಕ್ ಕ್ರಾಪ್ ಟಾಪ್ ಜತೆಗೆ ಘಾಗ್ರಾವನ್ನೂ ಧರಿಸಬಹುದು. ಒಡವೆಗಳ ಮಟ್ಟಿಗೆ ಆ್ಯಂಟಿಕ್ ಫಿನಿಷ್ ಸಿಲ್ವರ್ ನೆಕ್ಲೇಸ್ ಸಖತ್ ಲುಕ್ ಕೊಡುತ್ತದೆ.



'ಫೆಸ್ಟಿವ್ ಡ್ರೆಸಿಂಗ್' ಸರಣಿಯಲ್ಲಿ ಉದ್ದದ ಕುರ್ತಾ ಜತೆಗೆ ನೆಕ್ಲೇಸ್ ಹಾಗೂ ಕೈತುಂಬ ಬಳೆ ಧರಿಸಿದರೆ ಹೆಚ್ಚಿನ ಶೋಭೆ ತರಬಹುದು.

## ನವರಾತ್ರಿಗಾಗಿಯೇ ಎಥ್ನಿಕ್ ಸಂಗ್ರಹ

ಹಬ್ಬದ ಸಂದರ್ಭದಲ್ಲಿ ಎಥ್ನಿಕ್ ಉಡುಪುಗಳನ್ನು ಧರಿಸುವುದು ಟ್ರೆಂಡ್. ಈ ಉಡುಪುಗಳು ಸಂಪ್ರದಾಯಕ್ಕೂ ಆಧುನಿಕತೆಗೂ ಸೈ ಎನಿಸಿವೆ. ಹೀಗಾಗಿ ಎಲ್ಲ ವಯೋಮಾನದ ಮಹಿಳೆಯರನ್ನು ಸಮಾನವಾಗಿ ಸೆಳೆಯುತ್ತದೆ. ಎಥ್ನಿಕ್ ಸೀರೆ ಫ್ಯಾಷನೆಬಲ್ ಆಗಿದ್ದು, ಬಹು ವರ್ಣದ ಸೀರೆಗಳು, ಒಂದೇ ಸೀರೆಯಲ್ಲಿ ಹಲವು ಬಣ್ಣಗಳಿಂದ ಕೂಡಿದವು ಇಂದಿನ ಫ್ಯಾಷನ್‌ಗೆ ತಕ್ಕಂತೆ ಧರಿಸಿದರೆ ಸಖತ್ ಲುಕ್ ಕೊಡುತ್ತದೆ. ಹೀಗಾಗಿ ಇಂಥ ಉಡುಪುಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ. ನವರಾತ್ರಿಯ ಗೊಂಬೆ ಹಬ್ಬದಂಥ ಸಂದರ್ಭದಲ್ಲಿ ಎಥ್ನಿಕ್ ಉಡುಪುಗಳ ಮಾರಾಟ ಜೋರು. ದೇವಿ ಪೂಜೆ ಮಾಡುವ ಮಹಿಳೆಯರು ಎಥ್ನಿಕ್ ಉಡುಗೆಯನ್ನೇ ಮೆಚ್ಚುತ್ತಾರೆ. ಜತೆಗೆ ಸಾಮೂಹಿಕವಾಗಿ ಎಲ್ಲ ಮಹಿಳೆಯರು ಒಂದೇ ರೀತಿಯ ಸೀರೆ ಉಟ್ಟು ಸಂಪ್ರದಾಯ ಮೆರೆಯುತ್ತಾರೆ. ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಮಹಿಳೆಯರು ಹೆಚ್ಚು ಹೆಚ್ಚು ಒತ್ತು ಕೊಡುವುದು ಎಥ್ನಿಕ್ ಉಡುಪುಗಳಿಗೇ ಎಂಬುದು ಗಮನಾರ್ಹ.

